Date:

Registration number:



**ST. JOSEPH'S COLLEGE (AUTONOMOUS), BENGALURU-27**
**B.A/BSW KANNADA- IV SEMESTER**
**SEMESTER EXAMINATION: APRIL 2022**
**(Examination conducted in July 2022)**
**KAA- 418 - KANNADA**

**Time- 2 ½ hrs** **Max Marks-70**

**This question paper contains 2 printed pages and 2 parts**

**ಈ ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳಿಗೆ ಅನುಗುಣವಾಗಿ ಉತ್ತರಿಸಿ.**

## ಭಾಗ–1 ನಾಟಕ

**I.ಅ). ಈ ಕೆಳಗಿನ ಒಂದು ನಾಟಕದ ಆಯ್ದ ಭಾಗಕ್ಕೆ ಭಾವಾರ್ಥ ಬರೆಯಿರಿ. 1X5 = 5**

1. ಭೂಮಿಯನ್ನು ಮರೆಯುವ ಮನುಷ್ಯ, ತಾಯಿಯನ್ನು ನಿರ್ಲಕ್ಷಿಸುವ ಮನುಷ್ಯ, ತಂದೆಯ ಹೆಸರೆತ್ತಲೂ ನಾಚಿಕೊಳ್ಳುವ ಮನುಷ್ಯ! ಎಷ್ಟು ಮದರಾಸಾಗಳು, ಎಷ್ಟು ಬೃಹತ್ ಗ್ರಂಥಗಳು, ಎಷ್ಟು ಶೋಧನೆಗಳು, ಎಷ್ಟು ಜನ ಸಂತರು ಬಂದರೂ ಮನುಷ್ಯ ಏಕೆ ಹೀಗೆ ಭೀಕರ ವ್ಯಸನಗಳಲ್ಲಿ, ಅಜ್ಞಾನದಲ್ಲಿ ಸಿಕ್ಕಿಹಾಕಿಕೊಂಡಿದ್ದಾನೆ! ಅಲ್ಲಾಹುವೇ, ವಸಂತದಲ್ಲಿ ಪ್ರಜ್ವಲಿಸುವ ಗಿಡಮರಗಳ ಚೆಂದ ಕೂಡ ಇಲ್ಲದ ಮನುಷ್ಯನೇಕೆ ಕ್ರಮೇಣ ಕುರೂಪಿಯಾಗುತ್ತಿದ್ದಾನೆ, ಸ್ಮಶಾನವಾಗುತ್ತಿದ್ದಾನೆ?

2. ದೇಹ ನಿಜಕ್ಕೂ ಗೊತ್ತಿರುವುದು ಆ ದೇಹ ಹೊತ್ತ ವ್ಯಕ್ತಿಗೆ. ರೋಗಿಯ ಕರುಳು, ಪಿತ್ತಕೋಶ, ಉದರ, ಹೃದಯ – ಎಲ್ಲವೂ ರೋಗಿಗೆ ನೀಡುತ್ತಿರುವ ಕಿರಿಕಿರಿ ರೋಗಿಯ ಧ್ವನಿ, ನಿಲುವು, ಭಾಷೆಯ ಮೂಲಕ ಹೊರಹೊಮ್ಮುತ್ತದೆ. ಆ ಕಾರಣದಿಂದ ಮಾತ್ರ ಕೇಳುತ್ತಿದ್ದೇನೆ. ಸಾಧ್ಯವಾದರೆ ತಾವೇ ಉತ್ತರಿಸಬೇಕು. ನನ್ನ ಪ್ರಶ್ನೆಗಳು ವಿಚಿತ್ರವೆನ್ನಿಸಿದರೂ ಅದನ್ನು ಉತ್ತರಿಸಿದರೆ ಗುಣಪಡಿಸಲು ಸಹಾಯವಾಗುತ್ತದೆ.

**ಆ) ಈ ಕೆಳಗಿನ ಮೂರಕ್ಕೆ ಸಂದರ್ಭಸಹಿತ ವಿವರಿಸಿ. 3X5=-15**

3. ನಮ್ಮೊಂದಿಗೆ ಸರ್ವಶಕ್ತ ಅಲ್ಲಾಹು ಇದ್ದಾನೆ.
4. ಅವಸರ ಮತ್ತು ಭಯದಲ್ಲಿ ಅನುಮಾನಗಳು ಸಹಜ.
5. ಕಣ್ಣು ಹಾಕಿದ್ದನ್ನು ಗೆಲ್ಲಬಲ್ಲ ನಿಸರ್ಗದ ಚೈತನ್ಯ – ನಾದಿರ್ ಶಾ
6. ನಿನ್ನ ಕಿವಿಯಿಂದ ಈ ನಿನ್ನ ಕಾಯಿಲೆ ಶುರುವಾಗಿದೆ!
7. ಅಹಂಕಾರಿಗೆ ತನ್ನ ಕೃತ್ಯಗಳ ಪರಿಣಾಮವೇ ಗೊತ್ತಿರುವುದಿಲ್ಲ.
8. ನಾದಿರ್ ಶಾ ಈಗ ಕೇವಲ ರೋಗಿಯಲ್ಲ, ಸನ್ನಿಪಾತ ಹಿಡಿದ ಹುಚ್ಚ.

**II. ಈ ಕೆಳಗಿನ ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕವಾದ ಉತ್ತರ ಬರೆಯಿರಿ. 2X10=-20**

9. "ಗುಣಮುಖ" ಎನ್ನುವ ಶೀರ್ಷಿಕೆ ನಾಟಕಕ್ಕೆ ಒಪ್ಪುತ್ತದೆಯೇ? ವಿಮರ್ಶಾತ್ಮಕವಾಗಿ ಬರೆಯಿರಿ.
10. ಸಾದತ್ ಖಾನ್ ಅವನನ್ನು ನಾದಿರ್ ಕೊಲ್ಲಲು ಕಾರಣವೇನು? ವಿವರಿಸಿ.
11. ಹಕೀಮ ಅಲಾವಿ ಖಾನ್ ನಾದಿರನನ್ನು ಆಳವಾದ ನರಕದಿಂದ ಹೇಗೆ ಹೊರತಂದ? ವಿವರಿಸಿ.
12. ನಾದಿರ್ ಶಾ, ಸುಲೇಮಾನ್ ತನ್ವೀರ್, ಮಹಮ್ಮದ್ ನಜಿರುದ್ದೀನ್ ಶಾ – ಇವರಲ್ಲಿ ಇಬ್ಬರ ಪಾತ್ರ ಪರಿಚಯ ಮಾಡಿ.

## ಭಾಗ–2 ಕಥೆ/ಪ್ರಬಂಧ/ಲೇಖನ

**III. ಈ ಕೆಳಗಿನ ಎರಡು ಪ್ರಶ್ನೆಗಳಿಗೆ ವಿವರವಾದ ಉತ್ತರ ಬರೆಯಿರಿ. 2X10=-20**

13. ಕಿರಗೂರಿನಲ್ಲಿ ಮೂರು ರಾತ್ರಿ ಮೂರು ಹಗಲು ಬೀಸಿದ ಗಾಳಿಯ ಪರಿಣಾಮವನ್ನು ನಿರೂಪಿಸಿರಿ.
14. ಕಿರಗೂರಿನ  ಸಾಂದ್ರ ಬೇಸಾಯದ ಕುರಿತು ವಿವರವಾಗಿ ಬರೆಯಿರಿ.
15. ದೇವಕಣಗಿಲೆ ಮರದ ಕೆಳಗೆ ನಡೆದ ಕಿರಗೂರಿನ ಪಂಚಾಯಿತಿಯ ಕುರಿತು ವಿವರವಾಗಿ ಬರೆಯಿರಿ.
16. ಶಂಕರಪ್ಪ, ಕಾಳೇಗೌಡ, ದಾನಮ್ಮ, ನಾಗಮ್ಮ – ಇವರಲ್ಲಿ ಇಬ್ಬರ ಪಾತ್ರ ಪರಿಚಯ ಮಾಡಿರಿ.

**IV. ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ವಿವರಿಸಿ. 10X1=-10**

17) ಕಿರಗೂರಿನ ಗಯ್ಯಾಳಿಗಳು ನೀಳ್ಗತೆಯ ಲೇಖಕರು ಯಾರು?
18) ಸಹ್ಯಾದ್ರಿ ಪರ್ವತಗಳ ಜಟಿಲ ಬಂಧಗಳಲ್ಲಿ ಬಂದಿಯಾಗಿ ಸಿಕ್ಕಿಕೊಂಡಿದ್ದ ಹಳ್ಳಿ ಯಾವುದು?
19) ದಾನಮ್ಮ ಯಾರ ಹೆಂಡತಿ?
20) ನಾಗಮ್ಮ ಯಾರ ಜೊತೆ ಓಡಿಹೋಗಿದ್ದಳು?
21) ಶಂಕ್ರಪ್ಪ ಯಾರು?
22) ಹೆಂಡಕ್ಕೆ ಪಾಲಿಡಾಲ್ ಬೆರೆಸಿದವರು ಯಾರು?
23) ಕರಿಯನ ವೃತ್ತಿ ಯಾವುದು?
24) ದಾನಮ್ಮನಿಗೆ ಸಿಟ್ಟು ಯಾವಾಗ ಬರುತ್ತದೆ?
25) ಕಿರಗೂರಿನಲ್ಲಿ ಬೀಸಿದ ಗಾಳಿ ಯಾರ ಮೇಲೆ ಹೆಚ್ಚು ಪರಿಣಾಮ ಬೀರಿತು?
26) ಸತ್ತ ಹೆಣಕ್ಕೆ ಇಂಜೆಕ್ಷನ್ ಕೊಟ್ಟ ಡಾಕ್ಟರ್ ಯಾರು?

*******************